**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,**

**6ನೇ ಅಡ್ಡ ರಸ್ತೆ,ಮಲ್ಲೇಶ್ವರಂ, ಬೆಂಗಳೂರು – 560003**

# ವಲಸೆ ಪ್ರಮಾಣ ಪತ್ರ ಪಡೆಯಲು ಮಾರ್ಗಸೂಚಿ

# Guidelines to obtain Migration Certificate

- 2002 ಮತ್ತು ಪೂರ್ವದಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳು ಹೊರ ರಾಜ್ಯಗಳಲ್ಲಿ ವ್ಯಾಸಂಗ ಮಾಡಲು ಬಯಸಿದಲ್ಲಿ ನಿಗಧಿತ ಅರ್ಜಿಯಲ್ಲಿ ಭರ್ತಿ ಮಾಡಿ ನಿಗಧಿತ ಶುಲ್ಕವನ್ನು NEFT ಚಲನ್ ಮೂಲಕ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಪಾವತಿಸಿ, ಶಾಲೆಯ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು.

- ಮುಖ್ಯಶಿಕ್ಷಕರು ಅರ್ಜಿಯೊಂದಿಗೆ ವಿದ್ಯಾರ್ಥಿ ಉತ್ತೀರ್ಣಗೊಂಡ ಅಂಕಪಟ್ಟಿ ಇಲ್ಲವೇ ಫಲಿತಾಂಶ ಪಟ್ಟಿಯನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.

- ತದನಂತರ 2003 ರಿಂದ ಪ್ರಸ್ತುತ ವರ್ಷದವರೆಗೆ Online ಮೂಲಕ ವಲಸೆ ಪ್ರಮಾಣ ಪತ್ರವನ್ನು ಪಡೆಯುವ ಅವಕಾಶ ಕಲ್ಪಿಸಲಾಗಿರುತ್ತದೆ. ಇನ್ನು ಮುಂದೆ, ಮಂಡಳಿಯ ಜಾಲತಾಣದಲ್ಲಿ Online ಮೂಲಕ ವಲಸೆ ಪ್ರಮಾಣ ಪತ್ರವ್ರನ್ನು ಪಡೆಯತಕ್ಕದ್ದು. ವಿವರ ಕೆಳಕಂಡಂತಿರುತ್ತದೆ.

## 2003 ರಿಂದ 2019ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ವಲಸೆ ಪ್ರಮಾಣ ಪತ್ರವನ್ನು ಪಡೆಯಲು ಅನುಸರಿಸಬೇಕಾದ ವಿಧಾನ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಜಾಲತಾಣ http://www.kseeb.kar.nic.in ರ ಮೂಲಕ ನೇರವಾಗಿ ಸದರಿ ಪ್ರಮಾಣ ಪತ್ರ ಬಯಸುವ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ನಿಗಧಿತ ಶುಲ್ಕವನ್ನು ಆನ್‌ಲೈನ್ ಮುಖಾಂತರ ಎಲ್ಲಾ ಬ್ಯಾಂಕಿನ ಕ್ರೆಡಿಟ್ ಹಾಗೂ ಡೆಬಿಟ್‌ಕಾರ್ಡ್, PAYTM ಮತ್ತು UPI PAYMENT ಮೂಲಕ ಅಥವಾ ಈ ಸೌಲಭ್ಯ ಇಲ್ಲದವರು ಆಫ್‌ಲೈನ್ ಚಲನ್‌ನನ್ನು ಸದರಿ ಜಾಲತಾಣದಲ್ಲಿ ಡೌನ್‌ಲೋಡ್ ಮಾಡಿಕೊಂಡು ಯಾವುದಾದರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಾವತಿಸಬೇಕಾಗಿರುತ್ತದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ವಲಸೆ ಪ್ರಮಾಣ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಹಾಗೂ ಸಂಬಂಧಪಟ್ಟವರು ಈ ಪ್ರಮಾಣ ಪತ್ರದ ನೈಜತೆಯನ್ನು ಇದೇ ಜಾಲತಾಣದಲ್ಲಿ ಪರಿಶೀಲಿಸಿಕೊಳ್ಳುವ ಅವಕಾಶವನ್ನು ಸಹ ಕಲ್ಪಿಸಲಾಗಿರುತ್ತದೆ.

**ಸರ್ಕಾರದ ಆದೇಶ ಸಂಖ್ಯೆ ಇಡಿ 355 ಎಸ್.ಎಲ್.ಬಿ 2017 ದಿನಾಂಕ: 21–01–2019ರನ್ವಯ**

- **2002ರ ಹಿಂದಿನ ಸಾಲಿನವರೆಗೆ (Manual)ಆಗಿ ಪಡೆಯಲು**
  - **ಸಾಮಾನ್ಯ ಸೇವೆ ರೂ.175/–**
  - **ತುರ್ತು ಸೇವೆ ರೂ.350/–**

- **2003ರ ನಂತರ ಆನ್‌ಲೈನ್‌ನಲ್ಲಿ ಪಡೆಯಲು ಶುಲ್ಕ ರೂ.350/–**